

## ಗುಬ್ಬಿಕಾಲು ಸಸ್ಯ!

ಮಳೆಗಾಲದಲ್ಲಿ ಗದ್ದೆಯ ಅಂಚುಗಳಲ್ಲಿ, ಕೈತೋಟದ ಗಿಡಗಳ ನಡುವೆ ಹಸಿರಾಗಿ ಬೆಳೆಯುವ ಈ ಸಸ್ಯವು ಕಾಣಸಿಗುತ್ತದೆ. ಇದರ ಎಲೆಗಳು ಗುಬ್ಬಿ ಕಾಲಿನಂತೆ ಇರುವುದರಿಂದ ಗ್ರಾಮೀಣ ಭಾಗದಲ್ಲಿನ ಇದನ್ನು 'ಗುಬ್ಬಿ ಕಾಲು' ಎಂದು ಕರೆಯುವುದು ವಾಡಿಕೆ. ಮೆಹಂದಿ ಎಲೆಯೊಂದಿಗೆ ಈ ಗುಬ್ಬಿಕಾಲಿನ ರಸವನ್ನು ಸೇರಿಸಿ ತಲೆಗೆ ಹಚ್ಚಿಕೊಳ್ಳುವ ಪ್ರತೀತಿಯೂ ಇದೆ.

—ಸುಶೀಲಾ ಎಸ್.ಭಟ್, ಕಮಲಶಿಲೆ

## ಹಳೆಕಾಲದ ಗೂಡು ದೀಪಗಳು

ಆಕಾಶ ಗೂಡು, ಆಕಾಶ ಬುಟ್ಟಿ ಮುಂತಾಗಿ ಕರೆಯುವ ಗೂಡು ದೀಪಗಳನ್ನು ದೀಪಾವಳಿಗೆ ತಯಾರಿಸುವುದು ಸಂಪ್ರದಾಯ. ವಿಶೇಷವಾಗಿ ಗ್ರಾಮೀಣ ಭಾಗಗಳಲ್ಲಿ ಬಿದಿರಿನ ಕಡ್ಡಿಗಳನ್ನು ಕಲಾತ್ಮಕ ಕಟ್ಟಿ, ಅದಕ್ಕೆ ಬಣ್ಣಬಣ್ಣದ ಕಾಗದಗಳನ್ನು ಆಕರ್ಷಕವಾಗಿ ಅಂಟಿಸಿ, ಅದರೊಳಗೆ ದೀಪವನ್ನು ಇರಿಸಿ ಮನೆಯಂಗಳದಲ್ಲಿ ಕಂಬದ ಮೇಲೆ ನಿಲ್ಲಿಸುವ ಸೃಜನಶೀಲ ಕಲೆ ಜನಪ್ರಿಯವಾದುದು. ಒಂದು ಕಾಲದಲ್ಲಿ ಮನೆಯಂಗಳದಲ್ಲಿ ದೀಪಾವಳಿಯ ಧ್ವಜದಂತೆ ಶೋಭಿಸುತ್ತಿದ್ದ ಇವು ಇಂದಿನ ಆಧುನಿಕ ದೀಪಗಳ ಪೈಪೋಟಿಯಲ್ಲಿ ನೇಪಥ್ಯಕ್ಕೆ ಸರಿದಿವೆ.

—ಜೆ. ಪ್ರೇಮಾನಂದ





## ಶಿವಪ್ಪ ನಾಯಕನ ಅಳತೆ ಪಟ್ಟಿ

ಶಿವಮೊಗ್ಗ ಜಿಲ್ಲೆಯ ಕೆಳದಿಯ ವೀರಭದ್ರ ದೇಗುಲದ ಹೊರಾಂಗಣದ ಪ್ರಮುಖ ಆಕರ್ಷಣೆಗಳಲ್ಲಿ ವಾಸ್ತುಪುರುಷನ ಶಿಲ್ಪಕೆತ್ತನೆಯೂ ಒಂದು. ಕೆಳದಿಯ ಪ್ರಸಿದ್ಧ ಅರಸನಾಗಿದ್ದ ಶಿವಪ್ಪ ನಾಯಕ ತನ್ನ ಆಡಳಿತ ಕಾಲದಲ್ಲಿ ವ್ಯಾಪಾರಿಗಳನ್ನು, ಕುಶಲಕರ್ಮಿಗಳನ್ನು ಆಕರ್ಷಿಸಿ ವ್ಯಾಪಾರವನ್ನು ವಾಣಿಜ್ಯವನ್ನು ಉತ್ತಮಪಡಿಸಿದನು. ಸುಧಾರಿತ ಅಳತೆ,ತೆರಿಗೆ ಪದ್ಧತಿಗೆ ಒತ್ತು ಕೊಟ್ಟರೆಂದು ನಂಬಲಾದ ಕೆಳದಿಯ ಅರಸರ ಅಳತೆ ಪಟ್ಟಿಯನ್ನು ಈ ಕೆತ್ತನೆಯಲ್ಲಿ ಕಾಣಬಹುದು. ವಾಸ್ತುಪುರುಷನ ಬಲಭಾಗದ ಕಂಬದ ಬಲಪಕ್ಕದಲ್ಲಿ ಅಳತೆ ಪಟ್ಟಿಯ ಕೆತ್ತನೆ ಕಾಣಬಹುದು. ನಾಯಕ ಜಾರಿಗೆ ತಂದಿದ್ದ ಕಂದಾಯ ವ್ಯವಸ್ಥೆಗೆ ಅತ್ಯಂತ ಶಿಸ್ತು ನೀಡಿದ್ದರಿಂದ ಶಿಸ್ತಿಗೆ ಮತ್ತೊಂದು ಹೆಸರೇ ಶಿವಪ್ಪ ನಾಯಕ ಎಂಬ ನುಡಿ ನಿಂತಿತು.

—ಎಸ್. ಪ್ರಭಾವತಿ ಬೆಂಗಳೂರು